# ಎಡವೂ ಅಲ್ಲ, ಬಲವೂ ಅಲ್ಲ



(33ನೇ ಪುಟದಿಂದ)

★ ತಮಿಳಿನಲ್ಲಿ ಅಣ್ಣಾದೊರೈ, ಎಂಜಿಆರ್ ಕಾಲದಿಂದಲೂ ಸಿನಿಮಾದವರೇ ರಾಜಕಾರಣವನ್ನು ನಿಯಂತ್ರಿಸುತ್ತಿರುವುದು. ಅಧಿಕಾರ ಅನುಭವಿಸುವುದು. ಈಗಲೂ ಹಾಗೆಯೇ ಆಗಬಹುದೆ? ರಜನಿಕಾಂತ್, ಕಮಲಹಾಸನ್ ಇಬ್ಬರೂ ರಾಜಕೀಯ ಪ್ರವೇಶಿಸುತ್ತಿದ್ದಾರೆ..?

ರೈ: ನನ್ನನ್ನು ಕೇಳಿದರೆ– ನೀವು ಎಷ್ಟು ಸಿನಿಮಾಗಳಲ್ಲಿ ಅಭಿನಯಿಸಿದ್ದೀರಿ, ಎಷ್ಟು ಹಿಟ್ ಸಿನಿಮಾ ಕೊಟ್ಟಿದ್ದೀರಿ –ಎನ್ನುವುದೆಲ್ಲ ರಾಜಕೀಯದಲ್ಲಿ ಮುಖ್ಯ ಅಲ್ಲವೇ ಅಲ್ಲ. ನಿಮ್ಮ ರಾಜಕೀಯ ಐಡಿಯಾಲಜಿ ಏನು? ಜನರ ಸಲುವಾಗಿ ನಿಮ್ಮ ಕಾರ್ಯಕ್ರಮಗಳೇನು.. ಎನ್ನುವುದಷ್ಟೇ ಮುಖ್ಯವಾಗಬೇಕು.

★ ಗೌರಿಯವರು ವೈಯಕ್ತಿಕವಾಗಿ ನಿಮ್ಮ ಉತ್ತಮ ಸ್ನೇಹಿತೆಯೂ ಆಗಿದ್ದರು..

ರೈ: ಹೌದು. ಆಕೆ ತನ್ನ ಪತ್ರಿಕೆಯಲ್ಲಿ ಬಳಸುತ್ತಿದ್ದ ಭಾಷೆಯ ಬಗ್ಗೆ ನನಗೆ ಸಹಮತ ಇರಲಿಲ್ಲ. ಇದನ್ನು ಹಲವು ಸಲ ಆಕೆಗೆ ಹೇಳಿದ್ದೇನೆ. ಜಗಳ ಮಾಡಿದ್ದೇನೆ. ಭ್ರಷ್ಟರಿಗೆ ಬೇರೆ ರೀತಿಯ ಭಾಷೆ ಬರೆದರೆ ಅರ್ಥವಾಗುವುದಿಲ್ಲ.. ಎಂದು ನನ್ನ ವಾದವನ್ನು ಆಕೆ ತಳ್ಳಿಹಾಕುತ್ತಿದ್ದಳು. ಅದೇನೇ ಇದ್ದರೂ, ಪ್ರಜಾಪ್ರಭುತ್ವದಲ್ಲಿ ಪ್ರಶ್ನೆ ಮಾಡುವವರನ್ನು ಬಾಯಿ ಮುಚ್ಚಿಸುವುದನ್ನು ಒಪ್ಪಲಾಗದು. ಹಿಂಸೆಯನ್ನಂತೂ ಮೊದಲೇ ಒಪ್ಪಲಾಗದು.

★ ಕನ್ನಡದಲ್ಲಿ ನೀವು ನಿರ್ದೇಶಿಸಿದ ಮೂರು ಸಿನಿಮಾಗಳೂ ರೀಮೇಕ್! ಕನ್ನಡದಲ್ಲಿ ಸ್ವಮೇಕ್ ಸಿನಿಮಾ ಮಾಡುವುದು ಯಾವಾಗ?

ರೈ: ನೀವ್ಯಾಕೆ ರೀಮೇಕ್ ಸಿನಿಮಾಗಳನ್ನೇ ಮಾಡಿದ್ದೀರಿ ಎಂದು ಕೇಳಿದರೆ, ಯಾಕೆ ಮಾಡಬಾರದು ಎಂದು ಮರುಪ್ರಶ್ನೆ ಕೇಳುತ್ತೇನೆ. ನಾನು ನಿರ್ದೇಶಿಸಿದ ಮೂರೂ ಸಿನಿಮಾಗಳು ಸದಭಿರುಚಿಯದ್ದು. ನಾನೂ ನನ್ನ ಕನಸು, ಒಗ್ಗರಣೆ, ಇದೊಳ್ಳೆ ರಾಮಾಯಣ – ಈ ಮೂರು ಚಿತ್ರಗಳನ್ನೂ ಜನ ಸ್ವೀಕಾರ ಮಾಡಿದ್ದಾರೆ. ನನಗೂ ತುಂಬ ತೃಪ್ತಿ ಕೊಟ್ಟಿದೆ. ಸ್ವಮೇಕ್ ಮಾಡಬಾರದು ಅಂತಿಲ್ಲ. ಕಥೆ ಹುಡುಕುತ್ತಿದ್ದೇನೆ. ಜಯಂತ್ ಕಾಯ್ಕಿಣಿ, ಜೋಗಿ ಇಬ್ಬರಿಗೂ ಕಥೆ ಕೊಡಿ ಎಂದು ಕೇಳಿದ್ದೇನೆ. ಒಳ್ಳೆಯ ಕಥೆ ಸಿಕ್ಕಿದರೆ ಖಂಡಿತಾ ಮಾಡುತ್ತೇನೆ.

★ ತೆಲಂಗಾಣದ ಗ್ರಾಮವೊಂದನ್ನು ದತ್ತು ತೆಗೆದುಕೊಂಡಿದ್ದರ ಬಗ್ಗೆ ಹೇಳಿ..?

ರೈ: ಮೆಹಬೂಬ್‌ನಗರ ಜಿಲ್ಲೆಯಲ್ಲಿ ಕೊಂಡಾರೆಡ್ಡಿಪಲ್ಲಿ ಅಂತ. ಅಲ್ಲಿಯ ಶಾಲೆಗಳನ್ನು ಅಭಿವೃದ್ಧಿ ಮಾಡಿದ್ದೇನೆ. ಹಳ್ಳಿಗರಿಗೆ ಉದ್ಯೋಗಾವಕಾಶ ಒದಗಿಸಿದ್ದೇನೆ. ಕೃಷಿ ಮಾಡುತ್ತಿದ್ದೇನೆ. ಪ್ರಕಾಶ್ ರೈ ಫೌಂಡೇಷನ್ ಅಡಿಯಲ್ಲಿ ಈ ಕೆಲಸ ನಡೆಯುತ್ತಿದೆ. ದುಡಿದದ್ದನ್ನು ಎಲ್ಲವನ್ನೂ ಕುಟುಂಬದ ಸದಸ್ಯರಿಗೆ ಮೀಸಲಿಡುವುದು ಸರಿಯಲ್ಲ. ಸಮಾಜಕ್ಕೂ ಸ್ವಲ್ಪ ಕೊಡಬೇಕಲ್ಲ.. ನನ್ನನ್ನು ರೂಪಿಸಿದ ಸಮಾಜದ ಋಣ ತೀರಿಸಬೇಕಲ್ಲ.. ಅದಕ್ಕಾಗಿ ಫೌಂಡೇಷನ್ ಹೆಸರಿನಲ್ಲಿ ಸಾಕಷ್ಟು ಆಸ್ತಿ ಮಾಡಿದ್ದೇನೆ. ಗ್ರಾಮೀಣ ಬದುಕು ಹಸನಾಗಬೇಕು.

★ ಒಂದೇ ತರಹದ ಸ್ಟೀರಿಯೊಟೈಪ್ ವಿಲ್ಲನ್ ಪಾತ್ರಗಳು. ಸತ್ಯ ಹೇಳಿ, ಬೋರ್ ಆಗಲ್ವೆ?

ರೈ: ಆಗುತ್ತೆ. ಏನು ಮಾಡೋದು? ಉದ್ಯಮದಲ್ಲಿ ಇಂತಹದ್ದೆಲ್ಲ ಸಹಜ. ಅದಕ್ಕೇ ವೃತ್ತಿ ತೃಪ್ತಿ ಹುಡುಕಿಕೊಂಡು ಇನ್ನೇನೆಲ್ಲವನ್ನೂ ಮಾಡಹೊರಟಿದ್ದೇನೆ. ಹಳ್ಳಿಗಳಿಗೆ ಮುಖ ಮಾಡಿದ್ದೇನೆ. ನನ್ನನ್ನು ನಾನು ಶೋಧಿಸುವ ಕ್ರಮಗಳಿವು. ಜನರಿಗಾಗಿ ಏನು ಮಾಡುತ್ತಿದ್ದೀನೋ ಅದು ನಿಜವಾಗಿ ನನ್ನ ಸ್ವಂತದ ಆಸ್ತಿ ಎಂದು ತಿಳಿದುಕೊಂಡಿದ್ದೇನೆ. ಭೂಮಿಯ ದುಡಿಮೆಯಲ್ಲಿ ನೆಮ್ಮದಿ ಸಿಗುತ್ತಿದೆ.

★ ರಂಗಭೂಮಿಯಿಂದ ಬಂದವರೇ ಈಗಲೂ ಸಿನಿಮಾವನ್ನು ಗೆಲ್ಲಿಸುತ್ತಿರುವುದು, ಅಲ್ವೆ?

ರೈ: ನಿಜ. ಎಲ್ಲ ಭಾಷೆಗಳಲ್ಲೂ ಈಗ ರಂಗಭೂಮಿಯ ಪ್ರತಿಭೆಗಳನ್ನು ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತಿದ್ದಾರೆ. ಬರೀ ಹೀರೋಗಳ ಮ್ಯಾನರಿಸಂ ಮೇಲೆ ಸಿನಿಮಾಗಳು ನಡೆಯುವುದಿಲ್ಲ. ಎಷ್ಟೋ ಯಶಸ್ವೀ ಸಿನಿಮಾಗಳಲ್ಲಿ ರಂಗಭೂಮಿ ನಟರದ್ದೇ ಸಿಂಹಪಾಲು.

★ ಮುಂದೆ?

ರೈ: ಸದ್ಯ ಬೆಂಗಳೂರಿನಲ್ಲಿ ಸ್ವಂತ ಮನೆ ಮಾಡಿದ್ದೇನೆ. ಅದರ ಅರ್ಥ ಇಲ್ಲಿ ಏನಾದರೂ ಮಾಡಬೇಕು ಎನ್ನುವುದೇ ಆಗಿದೆ. ನೋಡೋಣ. ಈಗಷ್ಟೇ 'ಗೌಡ್ರು ಹೋಟೆಲ್' ಎನ್ನುವ ಪಿ.ಕುಮಾರ್ ನಿರ್ದೇಶನದ ಕನ್ನಡ ಸಿನಿಮಾದ ಶೂಟಿಂಗ್ ಮುಗಿಸಿದ್ದೇನೆ.

★ ಮಕ್ಕಳು ಏನ್ ಮಾಡ್ತಿದ್ದಾರೆ?

ರೈ: ದೊಡ್ಡವಳಿಗೆ 21. ಡಿಗ್ರಿ ಜತೆಗೆ ಒಳ್ಳೆಯ ಆರ್ಟಿಸ್ಟ್ ಆಗಿಯೂ ಬೆಳೆಯುತ್ತಿದ್ದಾಳೆ. ಆಯಿಲ್ ಪೇಯಿಂಟ್ ಚೆನ್ನಾಗಿ ಮಾಡ್ತಾಳೆ. ಇನ್ನೂ ಎರಡು ವರ್ಷ ಬೇರೆ ಸಾಧ್ಯತೆಗಳನ್ನು ಶೋಧಿಸು ಎಂದಿದ್ದೇನೆ. ಇನ್ನೂ ಮೂವರು ಚಿಕ್ಕವರು. ಮೂರು ತಲೆಮಾರಿನವರು. ●